ಅ) 1996-97ನೇ ಸಾಲಿನಲ್ಲಿ ಇದುವರೆವಿಗೆ ಯಾವ ಜಿಲ್ಲೆಗಳಿಗೂ ಅನುದಾನ ಮಂಜೂರು ಮಾಡಿರುವುದಿಲ್ಲ.

ಆ) - ಉದ್ಭವಿಸುವುದಿಲ್ಲ-

ಹುಣಸೂರು ಕ್ಷೇತ್ರದಲ್ಲಿ ಜಮೀನು ಸಾಗುವಳಿ ಕುರಿತು

611 (851) ಶ್ರೀ ಎ.ಹೆಚ್. ವಿಜಯಶಂಕರ (ಹುಣಸೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ಕ್ಷೇತ್ರದ ಕುಪ್ಪೆ ಕೊಳಗಟ್ಟ ಅಂದರೆ ಅರಬೇತಿ ಗುಪ್ಪ ಭಾಗದಲ್ಲಿ ಕೇಂದ್ರ ಸರ್ಕಾರದವರ ಯೋಜನೆಯೊಂದಕ್ಕಾಗಿ ಸರ್ಕಾರವು ಸಾವಿರಾರು ಎಕರೆ ಪ್ರದೇಶ ಸ್ವಾಧೀನ ಪಡಿಸಿದ್ದು ನಿಜವೇ;

ಆ) ಸದರಿ ಭಾಗದಲ್ಲಿ ಕಳೆದ ಐವತ್ತು ಅರವತ್ತು ವರ್ಷಗಳಿಂದ ಜಮೀನು ಸಾಗುವಳಿ ಮಾಡಿಕೊಂಡಿದ್ದ ರೈತರನ್ನು ಒಕ್ಕಲೆಬ್ಬಿಸಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಕೇವಲ ಹಂಗಾಮಿ ಸಾಗುವಳಿದಾರರು ಎಂಬ ಕಾರಣಕ್ಕೆ ಕಳೆದ ನಲವತ್ತು ವರ್ಷಗಳಿಂದ ಹಂಗಾಮಿ ಸಾಗುವಳಿ ಪಡೆದ ರೈತರಿಗೆ ಪರಿಹಾರ ನೀಡದಿರುವ ವಿಚಾರ ನಿಜವೇ;

ಈ) ಹಾಗಿದ್ದಲ್ಲಿ ಸದರಿಯವರಿಗೆ ಪರಿಹಾರ ನೀಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು (ವಿವರ ನೀಡುವುದು)?

ಶ್ರೀ ರಮೇಶ್ ಎ. ಜಿಗಜಿಣಗಿ (ಕಂದಾಯ ಸಚಿವರು):

ಅ) ಹೌದು ಒಟ್ಟು 718 ಎಕರೆ 39 ಗುಂಟೆ ಜಮೀನನ್ನು ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆ ಪರವಾಗಿ ಎಲೆಕ್ಟ್ರಾನಿಕ್ ವಾರ್ ಫಾರ್ ರೇಂಜ್ ಕರೆಯುವ ಸಾರ್ವಜನಿಕ ಉದ್ದೇಶಕ್ಕಾಗಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ಮೇಲ್ಕಂಡ ಉಪ ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವಿದಿಲ್ಲ.

ಇ) ಭೂಸ್ವಾಧೀನವಾದ ಜಮೀನು ರಕ್ಷಣಾ ಇಲಾಖೆಗೆ ವಹಿಸುವಾಗ ಜಮೀನು ಮಂಜುರಾತಿ ಬಗ್ಗೆ ದಾಖಲೆಗಳನ್ನು ನೀಡದೆ ಕೆಲವು ಪ್ರಕರಣಗಳಲ್ಲಿ ಪರಿಹಾರ ನೀಡಿರುವುದಿಲ್ಲ. ಈ ಪ್ರಕರಣಗಳು ಪರಿಶೀಲನೆಯಲ್ಲಿದೆ.

ಚಾಮರಾಜನಗರದಲ್ಲಿ ಸಾರಿಗೆ ಡಿಪೋ ಪ್ರಾರಂಭ

612 (954) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಇರುವ ಸಾರಿಗೆ ಡಿಪೋಗಳು ಎಷ್ಟು;

ಅ) ಹೊಸದಾಗಿ ಎಲ್ಲೆಲ್ಲಿ ಸಾರಿಗೆ ಡಿಪೋಗಳನ್ನು ಪ್ರಾರಂಭ ಮಾಡಲು ನಿರ್ಧರಿಸಲಾಗಿದೆ;

ಇ) ಹಿಂದುಳಿದ ಗಡಿ ಪ್ರದೇಶದ ಚಾಮರಾಜ ನಗರದಲ್ಲಿ ಸಾರಿಗೆ ಡಿಪೋ ಆರಂಭ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ;

ಈ) ಹಾಗಿಲ್ಲವಾದ್ದಲ್ಲಿ ಯಾವಾಗ ಆರಂಭ ಮಾಡಲಾಗುವುದು;

ಉ) ಚಾಮರಾಜ ನಗರಕ್ಕೆ ಬಸ್ಸುಗಳು ತೀವ್ರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಈ ಕೊರತೆಯನ್ನು ನೀಗಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಈವರೆಗೂ ಕ. ರಾ. ರ. ಸಾ. ಸಂಸ್ಥೆ 106 ಘಟಕಗಳನ್ನು ಸ್ಥಾಪಿಸಿರುತ್ತದೆ.

ಆ) ಕ. ರಾ. ರ. ಸಾ. ಸಂಸ್ಥೆ ಸಂಚಾರ ಕಾರ್ಯಾಚರಣೆಯ ಅನುಕೂಲಕ್ಕಾಗಿ ಶ್ರೀನಿವಾಸಪುರ, ಬಾಗೇಪಲ್ಲಿ, ದೊಡ್ಡಬಳ್ಳಾಪುರ, ವೈಟ್‌ಫೀಲ್ಡ್, ಚೆನ್ನಪಟ್ಟಣ, ಶಿರಾ ಮಾಲೂರು, ಹುಣಸೂರು, ಸವನೂರು, ಔರಾದ್, ರಾಯಬಾಗ್, ಬೆಂಗಳೂರು (5 ಘಟಕಗಳು ಬೆಂಗಳೂರು ನಗರ ಸಾರಿಗೆಗೆ), ಮುದೋಳ ಮತ್ತು ರಾಮನಾಥಪುರ ಮತ್ತು ಹೆಚ್ಚುವರಿಯಾಗಿ ಈ ಜೊತೆಗೆ ಬಿಜಾಪುರ, ರಾಯಚೂರು ಮತ್ತು ಗುಲ್ಬರ್ಗದಲ್ಲಿ ಘಟಕಗಳನ್ನು ಸ್ಥಾಪಿಸಲು ನಿರ್ದರಿಸಲಾಗಿದೆ.

ಇ) ಚಾಮರಾಜನಗರ ವ್ಯಾಪ್ತಿಯು ರಾಷ್ಟ್ರೀಕರಣಗೊಂಡಿರುವುದಿಲ್ಲವಾದ್ದರಿಂದಲೂ ಹಾಗೂ ಈ ವ್ಯಾಪ್ತಿಯನ್ನು ಕೂಡಲೇ ರಾಷ್ಟ್ರೀಕರಣ ಮಾಡುವ ಉದ್ದೇಶವಿಲ್ಲವಾದ್ದರಿಂದ ಪ್ರಸ್ತುತ ಚಾಮರಾಜನಗರದಲ್ಲಿ ಘಟಕವನ್ನು ಸ್ಥಾಪಿಸುವ ಉದ್ದೇಶವಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಇಲ್ಲ, ಚಾಮರಾಜನಗರ ತಾಲ್ಲೂಕು ರಾಷ್ಟ್ರೀಕರಣಗೊಂಡಿರುವುದಿಲ್ಲ ಹಾಗೂ ಈ ವ್ಯಾಪ್ತಿಯಲ್ಲಿ ಖಾಸಗೀಯವರು ಕಾರ್ಯಾಚರಣೆ ಮಾಡುತ್ತಿದ್ದಾರೆ.

ಊ) ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ರೋಗ ತಗುಲಿ ತೆಂಗಿನ ಬೆಳೆಗೆ ಹಾನಿ

613 (955) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯರಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಬಹುತೇಕ ಕಡೆ ತೆಂಗಿನ ತೋಟಕ್ಕೆ ರೋಗ ತಗುಲಿ ತೆಂಗಿನ ಬೆಳೆವಣಿಗೆಗೆ ಅಪಾಯ ಒದಗಿದೆ, ರೋಗ ನಿವಾರಣೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;